ಆ) ಪರಿಷ್ಕೃತ ಅಂದಾಜಿನಂತೆ ಅಗತ್ಯ ಅನುದಾನವನ್ನು ಒದಗಿಸಲಾಗಿದೆ.

ಇ) ಮಹಾಲೇಖಪಾಲರು ಸವಿವರ ಯೋಜನಾವಾರು ಲೆಕ್ಕವನ್ನು ಇನ್ನೂ ಒದಗಿಸಬೇಕಾಗಿದೆ. ತಾತ್ಕಾಲಿಕ ಲೆಕ್ಕದಂತೆ, 2008–09ನೇ ಸಾಲಿನ ರಾಜ್ಯ ಯೋಜನಾ ವೆಚ್ಚವು 21401 ಕೋಟಿ ರೂ.ಗಳು.

1110 ಶ್ರೀ ಅಪ್ಪಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ ನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದಾಗಿ ಪೊಲೀಸ್ ಠಾಣೆ ಮಂಜೂರು ಮಾಡುವಾಗ ಸರ್ಕಾರ ಅನುಸರಿಸುವ ಮಾನದಂಡಗಳು ಯಾವುವು?

ಆ) ರಾಜ್ಯದಲ್ಲಿ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ) ಬಿಜಾಪುರ ನಗರದಲ್ಲಿ ದಿನೇ ದಿನೇ ಜನಸಂಖ್ಯೆ ಹೆಚ್ಚಾಗುತ್ತಿದ್ದು, ನಗರವು ತನ್ನ ವ್ಯಾಪ್ತಿಯನ್ನು ವಿಸ್ತಾರ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಾದರೆ ಬಿಜಾಪುರ ನಗರದ ಜಲನಗರದಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಉ) ಹಾಗಿದ್ದಲ್ಲಿ, ಜಲನಗರದಲ್ಲಿ ಪೊಲೀಸ್ ಠಾಣೆಯನ್ನು ಎಂದಿನಿಂದ ಮಂಜೂರು ಮಾಡಲಾಗುವುದು; ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿ ಪ್ರಕಾರ ಒಂದು ಹೊಸ ಪೊಲೀಸ್ ಠಾಣೆ ಸೃಜನೆ ಹಾಗೂ ಪೊಲೀಸ್ ಉಪಠಾಣೆಗಳನ್ನು ಮೇಲ್ದರ್ಜೆಗೇರಿಸಬೇಕಾದಲ್ಲಿ ಈ ಕೆಳಗಿನ ಮಾನದಂಡಗಳನ್ನು ನಿಗಧಿಪಡಿಸಿದೆ.

ವ್ಯಾಪ್ತಿ	–	150 ಚ.ಕಿ.ಮಿ
ಜನಸಂಖ್ಯೆ ದಟ್ಟಣೆ	–	60,000
ಅಪರಾಧಗಳು	–	ವಾರ್ಷಿಕ 600 ಪ್ರಕರಣಗಳು

As per National Police Commission for creation of a new Police Station and up-gradation of police outpost the criteria are as follows :

Area	-	150 Sq.K.M.
Population Density	-	60,000
Occurrence of Crimes	-	600 Per year

ಆ) ರಾಜ್ಯದ ವಿವಿಧ ಸ್ಥಳಗಳಲ್ಲಿ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡುವ ಕ್ರೋಢೀಕೃತ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. (ವಿವರಗಳನ್ನು ಅನುಬಂಧದಲ್ಲಿ ನೀಡಿದೆ).

Consolidated proposal to sanction new Police Stations at different places in the State is before the Government. (Details are given in the Annexure).

ಇ) ಈ) ಮತ್ತು ಉ)

2009ನೇ ಸಾಲಿನಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ರಾಜ್ಯದ ವಿವಿಧ ಸ್ಥಳಗಳಲ್ಲಿ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲು ಕಳುಹಿಸಿರುವ ಕ್ರೋಢೀಕೃತ ಪ್ರಸ್ತಾವನೆಯಲ್ಲಿ ಇದು ಸೇರಿರುತ್ತದೆ. ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಕ್ರೋಢೀಕೃತ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

This is included in the consolidated proposal sent by the DG & IGP for sanctioning new Police Stations at various places in the State during 2009. Consolidated proposal will be considered depending on the availability of funds.

ಅನುಬಂಧ

ಕ್ರೋಢೀಕೃತ ಪ್ರಸ್ತಾವನೆಯನ್ವಯ ಹೊಸದಾಗಿ ಪೊಲೀಸ್ ಠಾಣೆಯನ್ನು ಮಂಜೂರು ಮಾಡಲು ಸರ್ಕಾರದ ಮುಂದಿರುವ ಪ್ರಸ್ತಾವನೆಗಳ ವಿವರಗಳು :

ಕ್ರ ಸಂ	ವಿಷಯ
1	ಬೆಂಗಳೂರು ಜಿಲ್ಲೆ ನೆಲಮಂಗಲ ಪೊಲೀಸ್‌ಠಾಣೆ ವ್ಯಾಪ್ತಿಯ ಮಾದನಾಯಕ ಹಳ್ಳಿಯಲ್ಲಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ
2	ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕ್ ಕೇಂದ್ರದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯನ್ನು ಹೊಸದಾಗಿ ತೆರೆಯುವ ಬಗ್ಗೆ.
3	ರಾಮನಗರ ಜಿಲ್ಲೆಯ ಬಿಡದಿ ಪೊಲೀಸ್ ಠಾಣಾ ವ್ಯಾಪ್ತಿಯ

	ಕುಂಬಳಗೋಡುವಿನಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ತೆರೆಯುವ ಬಗ್ಗೆ.
4	ಹಾಸನ ಜಿಲ್ಲೆಯ ಹಾಸನ ನಗರದ ವಿದ್ಯಾನಗರದಲ್ಲಿ ಪೊಲೀಸ್ ಠಾಣೆಯನ್ನು ತೆರೆಯುವ ಬಗ್ಗೆ
5	ಬಿಜಾಪುರ ನಗರ ಜಲನಗರ ಬಡಾವಣೆಯಲ್ಲಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ
6	ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ಪೊಲೀಸ್ ಠಾಣೆ ತೆರೆಯುವ ಬಗ್ಗೆ.

1101 ಶ್ರೀ ಖಾದರ್ ಯು.ಟಿ (ಮಂಗಳೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪೊಲೀಸ್ ಪಡೆಯ ಆಧುನೀಕರಣ ಯೋಜನೆಗಾಗಿ 2008–09 ಮತ್ತು 2009–10ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಹಣವೆಷ್ಟು? (ವಿವರ ನೀಡುವುದು);

ಆ) ಇದರಲ್ಲಿ, ಕೇಂದ್ರ ಸರ್ಕಾರದಿಂದ ಬಂದ ಅನುದಾನದ ಪಾಲು ಎಷ್ಟು? ರಾಜ್ಯ ಸರ್ಕಾರದ ಪಾಲು ಎಷ್ಟು?

ಇ) ಈ ಹಣವನ್ನು ಯಾವ ಯಾವ ಕೆಲಸಗಳಿಗೆ ವೆಚ್ಚ ಮಾಡಲಾಗಿದೆ? ಉಳಿದಿರುವ ಹಣವೆಷ್ಟು? (ವಿವರ ನೀಡುವುದು);

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ)

ಕ್ರ ಸಂ.	ವರ್ಷ	ಆಯವ್ಯಯದಲ್ಲಿ ಕಲ್ಪಿಸಲಾದ ಅನುದಾನ ರೂ.ಲಕ್ಷಗಳಲ್ಲಿ	ಬಿಡುಗಡೆಮಾಡಿದ ಅನುದಾನ ರೂ. ಲಕ್ಷಗಳಲ್ಲಿ
1	2008–09	9448.86	9287.86 ಮುಂದುವರೆದು 2008–09ನೇ ಸಾಲಿನ ಕ್ರಿಯಾ ಯೋಜನೆಗೆ ಕೇಂದ್ರ ಸರ್ಕಾರವು ಹೆಚ್ಚುವರಿಯಾಗಿ ರೂ,9,81,50,163/– ಗ್ರಾಂಟ್ ಇನ್ ಏಡ್ ಅನ್ನು ದಿನಾಂಕ: 31/03/2009 ರಂದು